## 2. ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು:

**1. ಆಮ್ಲಗಳು ಎಂದರೇನು? ಉದಾ. ಕೊಡಿ.**

ಆಮ್ಲಗಳು ಸಂಯುಕ್ತಗಳಾಗಿದ್ದು, ಒಂದು ಅಥವಾ ಹೆಚ್ಚು ಹೈಡ್ರೋಜನ್ ಪರಮಾಣುಗಳನ್ನು ಹೊಂದಿವೆ ಮತ್ತು ನೀರಿನಲ್ಲಿ ವಿಲೀನವಾದಾಗ ಹೈಡ್ರೋನಿಯಂ ಅಯಾನುಗಳನ್ನು ($H_3O^+$)ಕೊಡುತ್ತವೆ. ಉದಾ: ಹೈಡ್ರೋಕ್ಲೋರಿಕ್ಆಮ್ಲ($HCl$), ನೈಟ್ರಿಕ್ಆಮ್ಲ($HNO_3$), ಸಲ್ಫ್ಯೂರಿಕ್ಆಮ್ಲ ($H_2SO_4$), ಕಾರ್ಬೋನಿಕ್ಆಮ್ಲ ($H_2CO_3$), ಇತ್ಯಾದಿ.

**2. ಆಮ್ಲಗಳ ಸಾಮಾನ್ಯ ಗುಣಗಳನ್ನು ತಿಳಿಸಿ.**

ಆಮ್ಲಗಳು ರುಚಿಯಲ್ಲಿ ಹುಳಿಯಾಗಿದ್ದು, ನೀಲಿ ಲಿಟ್ಮಸ್ ಅನ್ನು ಕೆಂಪು ಲಿಟ್ಮಸ್ ಆಗಿ ಪರಿವರ್ತಿಸುತ್ತವೆ.

**3. ಪ್ರತ್ಯಾಮ್ಲಗಳು ಎಂದರೇನು? ಉದಾ.ಕೊಡಿ.**

ಪ್ರತ್ಯಾಮ್ಲಗಳು ಲೋಹೀಯ ಆಕ್ಸೈಡ್ ಅಥವಾ ಹೈಡ್ರಾಕ್ಸೈಡ್‌ಗಳಾಗಿದ್ದು, ಆಮ್ಲಗಳೊಂದಿಗೆ ವರ್ತಿಸಿದಾಗ ಲವಣ ಮತ್ತು ನೀರನ್ನು ಉಂಟುಮಾಡುತ್ತವೆ. ಉದಾ: ಸೋಡಿಯಂ ಹೈಡ್ರಾಕ್ಸೈಡ್($NaOH$), ಪೊಟಾಸಿಯಂ ಹೈಡ್ರಾಕ್ಸೈಡ್($KOH$), ಮೇಗ್ನೀಸಿಯಂ ಹೈಡ್ರಾಕ್ಸೈಡ್($Mg(OH)_2$), ಅಮೋನಿಯಂ ಹೈಡ್ರಾಕ್ಸೈಡ್($NH_4OH$), ಸೋಡಿಯಂ ಕಾರ್ಬೋನೇಟ್ ($Na_2CO_3$), ಸೋಡಿಯಂ ಹೈಡ್ರೋಜನ್ ಕಾರ್ಬೋನೇಟ್($NaHCO_3$), ಇತ್ಯಾದಿ. .

**4. ಪ್ರತ್ಯಾಮ್ಲಗಳ ಸಾಮಾನ್ಯ ಗುಣಗಳನ್ನು ತಿಳಿಸಿ**

ಪ್ರತ್ಯಾಮ್ಲಗಳು ರುಚಿಯಲ್ಲಿ ಕಹಿಯಾಗಿದ್ದು, ಕೆಂಪು ಲಿಟ್ಮಸ್ ಅನ್ನು ನೀಲಿ ಲಿಟ್ಮಸ್ ಆಗಿ ಪರಿವರ್ತಿಸುತ್ತವೆ.

**5. ಕ್ಷಾರಗಳು ಎಂದರೇನು?**

ಕ್ಷಾರಗಳು ಪ್ರತ್ಯಾಮ್ಲಗಳಾಗಿದ್ದು, ನೀರಿನಲ್ಲಿ ವಿಲೀನವಾಗುತ್ತವೆ. ಉದಾ. ಸೋಡಿಯಂ ಹೈಡ್ರಾಕ್ಸೈಡ್, ಪೊಟಾಸಿಯಂ ಹೈಡ್ರಾಕ್ಸೈಡ್, ಇತ್ಯಾದಿ.

**6. ನಿಮಗೆ ಮೂರು ಪ್ರನಾಳಗಳನ್ನು ನೀಡಲಾಗಿದೆ. ಒಂದರಲ್ಲಿ ಭಟ್ಟಿಇಳಿಸಿದ ನೀರು ಮತ್ತು ಇನ್ನೆರಡರಲ್ಲಿ ಕ್ರಮವಾಗಿ ಆಮ್ಲೀಯ ಮತ್ತು ಪ್ರತ್ಯಾಮ್ಲೀಯ ದ್ರಾವಣಗಳಿವೆ. ನಿಮಗೆ ಕೇವಲ ಕೆಂಪು ಲಿಟ್ಮಸ್ ಕಾಗದವನ್ನು ಮಾತ್ರ ನೀಡಿದರೆ ಪ್ರನಾಳದಲ್ಲಿನ ಪ್ರತಿಯೊಂದು ಮಾದರಿಯನ್ನು ಹೇಗೆ ಗುರುತಿಸುವಿರಿ?**

- ಮೊದಲು ಕೆಂಪು ಲಿಟ್ಮಸ್ ಕಾಗದವನ್ನು ಮೂರು ಮಾದರಿಗಳ ಪ್ರನಾಳಗಳಲ್ಲಿ ಅದ್ದಿ, ಯಾವ ಪ್ರನಾಳದಲ್ಲಿ ಕೆಂಪು ಲಿಟ್ಮಸ್ ಕಾಗದವು ನೀಲಿ ಬಣ್ಣಕ್ಕೆ ಬದಲಾಗುತ್ತದೆಯೋ ಅದು ಪ್ರತ್ಯಾಮ್ಲೀಯ ದ್ರಾವಣ.
- ಹಾಗೆಯೇ ನೀಲಿಯಾಗಿ ಬದಲಾದ ಲಿಟ್ಮಸ್ ಕಾಗದವನ್ನು ಇನ್ನೆರಡು ಪ್ರನಾಳಗಳಲ್ಲಿ ಯಾವ ದ್ರಾವಣ ಕೆಂಪು ಬಣ್ಣಕ್ಕೆ ಬದಲಾಯಿಸಿತೋ ಅದು ಆಮ್ಲೀಯ ದ್ರಾವಣ.
- ಉಳಿದ ಮೂರನೇ ಪ್ರನಾಳದಲ್ಲಿನ ಮಾದರಿ ಭಟ್ಟಿ ಇಳಿಸಿದ ನೀರು.

**7. ಸಾರರಿಕ್ತ ಆಮ್ಲದೊಂದಿಗೆ (ಸಲ್ಫ್ಯೂರಿಕ್ ಆಮ್ಲ) ಸತುವಿನ ವರ್ತನೆಯಿಂದ ತಿಳಿದುಕೊಂಡ ಅಂಶವನ್ನು ರಾಸಾಯನಿಕ ಸಮೀಕರಣದೊಂದಿಗೆ ಸಂಕ್ಷಿಪ್ತವಾಗಿ ವಿವರಿಸಿ.**

$$Zn + H_2SO_4 \rightarrow ZnSO_4 + H_2\uparrow$$

ಲೋಹವು ಆಮ್ಲಗಳಿಂದ ಹೈಡ್ರೋಜನ್ ಪರಮಾಣುಗಳನ್ನು ಹೈಡ್ರೋಜನ್ ಅನಿಲದ ರೂಪದಲ್ಲಿ ಸ್ಥಾನಪಲ್ಲಟಗೊಳಿಸಿದೆ ಮತ್ತು ಲವಣವನ್ನು ಉತ್ಪತ್ತಿಮಾಡಿದೆ ಎಂದು ಈ ಮೇಲಿನ ಕ್ರಿಯೆಯಿಂದ ತಿಳಿದುಬಂದಿದೆ.

**8. ಲೋಹದ ಕಾರ್ಬೋನೇಟ್ ಮತ್ತು ಲೋಹದ ಹೈಡ್ರೋಜನ್ ಕಾರ್ಬೋನೇಟ್‌ಗಳು ಆಮ್ಲಗಳೊಂದಿಗೆ ವರ್ತಿಸುವ ಕ್ರಿಯೆಯನ್ನು ಸಮೀಕರಣದ ಸಹಾಯದಿಂದ ಸಂಕ್ಷಿಪ್ತವಾಗಿ ವಿವರಿಸಿ.**

- ಎರಡು ಪ್ರನಾಳಗಳನ್ನು ತೆಗೆದುಕೊಂಡು. ಒಂದು ಪ್ರನಾಳದಲ್ಲಿ ಸೋಡಿಯಂ ಕಾರ್ಬೋನೇಟ್ ಮತ್ತು ಮತ್ತೊಂದು ಪ್ರನಾಳದಲ್ಲಿ ಸೋಡಿಯಂ ಹೈಡ್ರೋಜನ್ ಕಾರ್ಬೋನೇಟ್ ತೆಗೆದುಕೊಳ್ಳಿ.
- ಎರಡೂ ಪ್ರನಾಳಗಳಿಗೂ ಸುಮಾರು 2ml ನಷ್ಟು ಸಾರರಿಕ್ತ $HCl$ ಸೇರಿಸಿ.
  - $Na_2CO_3(s) + 2HCl(aq) \rightarrow 2NaCl(aq) + H_2O(l) + CO_2(g)$

- $NaHCO_3(s) + HCl(aq) \rightarrow NaCl(aq) + H_2O(l) + CO_2(g)$

ಈ ಮೇಲಿನ ಕ್ರಿಯೆಗಳಿಂದ ಕಂಡುಬಂದ ಅಂಶವೆಂದರೆ ಲೋಹದಕಾರ್ಬೋನೇಟ್ ಮತ್ತು ಲೋಹದಹೈಡ್ರೋಜನ್ ಕಾರ್ಬೋನೇಟ್‌ಗಳು ಆಮ್ಲಗಳೊಂದಿಗೆ ವರ್ತಿಸಿ ಸಂಬಂಧಪಟ್ಟ ಲವಣ, ಕಾರ್ಬನ್‌ಡೈಆಕ್ಸೈಡ್ ಮತ್ತು ನೀರನ್ನು ಉಂಟುಮಾಡುತ್ತವೆ.

- ಪ್ರತಿ ಪ್ರನಾಳದಲ್ಲಿ ಬಿಡುಗಡೆಯಾದ ಅನಿಲ (ಕಾರ್ಬನ್ ಡೈಆಕ್ಸೈಡ್) ವನ್ನು ಸುಣ್ಣದ ತಿಳಿನೀರಿನ ಮೂಲಕ ಹಾಯಿಸಿ
- ಸುಣ್ಣದ ತಿಳಿನೀರು ಹಾಲಿನಂತ ಬೆಳ್ಳಗೆ ಕಾಣುತ್ತದೆ.

ಪ್ರನಾಳ 1 ರಲ್ಲಿ ಬಿಡುಗಡೆಯಾದ ಬಿಳಿಯ ಪ್ರಕ್ಷೇಪ ಕ್ಯಾಲ್ಸಿಯಂ ಕಾರ್ಬೋನೇಟ್ ($CaCO_3$)
ಪ್ರನಾಳ 2 ರಲ್ಲಿ ಬಿಡುಗಡೆಯಾದ ಜಲವಿಲೀನಗೊಳ್ಳುವ ಪ್ರಕ್ಷೇಪ ಕ್ಯಾಲ್ಸಿಯಂ ಹೈಡ್ರೋಜನ್ ಕಾರ್ಬೋನೇಟ್ ($CaH(CO_3)_2$)

**9. ಆಮ್ಲ ಮತ್ತು ಪ್ರತ್ಯಾಮ್ಲಗಳು ಪರಸ್ಪರ ಹೇಗೆ ವರ್ತಿಸುತ್ತವೆ?**

ಆಮ್ಲ ಮತ್ತು ಪ್ರತ್ಯಾಮ್ಲಗಳು ಪರಸ್ಪರ ವರ್ತಿಸಿ, ಲವಣ ಮತ್ತು ನೀರನ್ನು ಕೊಡುತ್ತವೆ. ಈ ಕ್ರಿಯೆಗೆ ತಟಸ್ಥೀಕರಣಕ್ರಿಯೆ ಎನ್ನುವರು. ಉದಾ: $NaOH(aq) + HCl(aq) \rightarrow NaCl(aq) + H_2O(l)$

**10. ಒಬ್ಬ ವಿದ್ಯಾರ್ಥಿಯು ಒಂದು ಬೀಕರ್‌ನಲ್ಲಿ ಸ್ವಲ್ಪ ತಾಮ್ರದ ಆಕ್ಸೈಡ್ ತೆಗೆದುಕೊಂಡು ಅದಕ್ಕೆ ನಿಧಾನವಾಗಿ ಸಾರರಿಕ್ತ ಹೈಡ್ರೋಕ್ಲೋರಿಕ್ ಆಮ್ಲವನ್ನು ಸೇರಿಸುತ್ತಾನೆ. ದ್ರಾವಣದ ಬಣ್ಣದಲ್ಲಿ ಉಂಟಾದ ಬದಲಾವಣೆ ಏನು? ಮತ್ತು ಅದರ ಹೆಸರೇನು?**

ದ್ರಾವಣವು ಹಸಿರು ಬಣ್ಣಕ್ಕೆ ಬದಲಾಯಿತು ಮತ್ತು ಆ ಸಂಯುಕ್ತದ ಹೆಸರು ತಾಮ್ರದ (II)ಕ್ಲೋರೈಡ್ ($CuCl_2$)

**11. ಅಲೋಹೀಯ ಆಕ್ಸೈಡ್‌ಗಳು ಪ್ರತ್ಯಾಮ್ಲಗಳೊಂದಿಗೆ ವರ್ತಿಸಿದಾಗ ಏನಾಗುತ್ತದೆ?**

ಅಲೋಹೀಯ ಆಕ್ಸೈಡ್‌ಗಳು ಪ್ರತ್ಯಾಮ್ಲಗಳೊಂದಿಗೆ ವರ್ತಿಸಿದಾಗ ಲವಣ ಮತ್ತು ನೀರನ್ನು ಉತ್ಪತ್ತಿಮಾಡುತ್ತವೆ. ಇದರಿಂದ ಅಲೊಹೀಯ ಆಕ್ಸೈಡ್‌ಗಳು ಆಮ್ಲೀಯ ಗುಣ ಹೊಂದಿವೆ ಎಂದು ತಿಳಿಯಬಹುದು.

**12. ಮೊಸರು ಮತ್ತು ಹುಳಿ ಪದಾರ್ಥಗಳನ್ನು ಹಿತ್ತಾಳೆ ಮತ್ತು ತಾಮ್ರದ ಪಾತ್ರೆಗಳಲ್ಲಿ ಏಕೆ ಸಂಗ್ರಹಿಸಡಬಾರದು?**

ಮೊಸರು ಮತ್ತು ಹುಳಿ ಪದಾರ್ಥಗಳು ಆಮ್ಲೀಯ ಗುಣ ಹೊಂದಿವೆ, ಇವುಗಳಲ್ಲಿರುವ ಆಮ್ಲಗಳು ಹಿತ್ತಾಳೆ ಮತ್ತು ತಾಮ್ರ ಲೋಹಗಳೊಂದಿಗೆ ವರ್ತಿಸಿ ವಿಷಕಾರಿ ಸಂಯುಕ್ತಗಳನ್ನು ಉಂಟುಮಾಡುತ್ತವೆ.

**13. ಆಮ್ಲವು ಲೋಹದೊಂದಿಗೆ ವರ್ತಿಸಿದಾಗ ಸಾಮಾನ್ಯವಾಗಿ ಯಾವ ಅನಿಲ ಬಿಡುಗಡೆಯಾಗುತ್ತದೆ? ಉದಾಹರಣೆಯೊಂದಿಗೆ ವಿವರಿಸಿ. ಈ ಅನಿಲದ ಅಸ್ತಿತ್ವವನ್ನು ನೀವು ಹೇಗೆ ಪರೀಕ್ಷಿಸುವಿರಿ?**

ಆಮ್ಲವು ಲೋಹದೊಂದಿಗೆ ವರ್ತಿಸಿ ಬಿಡುಗಡೆಯಾಗುವ ಅನಿಲ – ಹೈಡ್ರೋಜನ್($H_2$). ಬಿಡುಗಡೆಯಾದ ಅನಿಲವನ್ನು ಸಾಬೂನಿನ ದ್ರಾವಣದೊಂದಿಗೆ ಹಾಯಿಸಿದಾಗ, ದೊಡ್ಡಗುಳ್ಳೆಗಳು ಸಂಗ್ರಹವಾಗುತ್ತವೆ. ಈ ಗುಳ್ಳೆಗಳ ಬಳಿ ಉರಿಯುತ್ತಿರುವ ಜ್ವಾಲೆಯನ್ನು ತಂದಾಗ ಜೋರಾದ **ಪಪ್** ಶಬ್ಧದೊಂದಿಗೆ ಜ್ವಾಲೆ ಆರಿಹೋಗುತ್ತದೆ. ಇದರಿಂದ ಬಿಡುಗಡೆಯಾಗಿರುವುದು ಹೈಡ್ರೋಜನ್ ಅನಿಲ ಎಂದು ತಿಳಿಯುತ್ತದೆ.

**14. ಲೋಹೀಯ ಸಂಯುಕ್ತ 'ಎ' ಸಾರರಿಕ್ತ ಹೈಡ್ರೋಕ್ಲೋರಿಕ್ ಆಮ್ಲದೊಂದಿಗೆ ವರ್ತಿಸಿ ಗುಳ್ಳೆಗಳನ್ನು (effervescence) ಉತ್ಪತ್ತಿ ಮಾಡುತ್ತದೆ. ಬಿಡುಗಡೆಯಾದ ಅನಿಲ ಉರಿಯುವ ಮೇಣದ ಬತ್ತಿಯನ್ನು ಆರಿಸುತ್ತದೆ. ಈ ಕ್ರಿಯೆಯಲ್ಲಿ ಉಂಟಾದ ಒಂದು ಸಂಯುಕ್ತ ಕ್ಯಾಲ್ಸಿಯಂ ಕ್ಲೋರೈಡ್, ಆದರೆ ಕ್ರಿಯೆಯ ಸರಿದೂಗಿಸಿದ ರಾಸಾಯನಿಕ ಸಮೀಕರಣ ಬರೆಯಿರಿ.**

$CaCO_3 + 2HCl \rightarrow CaCl_2 + H_2O + CO_2\uparrow$('ಎ' ಎಂಬ ಸಂಯುಕ್ತ – ಕ್ಯಾಲ್ಸಿಯಂ ಕಾರ್ಬೋನೇಟ್ ($CaCO_3$) ಆಗಿದೆ).

**15. ಆಮ್ಲ ಮತ್ತು ಪ್ರತ್ಯಾಮ್ಲಗಳ ನಡುವಿನ ಸಾಮಾನ್ಯ ಗುಣಗಳೇನು?**

- ಆಮ್ಲ ಮತ್ತು ಪ್ರತ್ಯಾಮ್ಲಗಳನ್ನು ನೀರಿನಲ್ಲಿ ವಿಲೀನಗೊಳಿಸಿದಾಗ ಅಯಾನುಗಳಾಗಿ ಬೇರ್ಪಡುತ್ತವೆ.
- ಆಮ್ಲ ಮತ್ತು ಪ್ರತ್ಯಾಮ್ಲಗಳನ್ನು ನೀರಿನಲ್ಲಿ ವಿಲೀನಗೊಳಿಸುವ ಪ್ರಕ್ರಿಯೆ ಬಹಿರುಷ್ಣಕ ಕ್ರಿಯೆಯಾಗಿದೆ.
- ಆಮ್ಲ ಮತ್ತು ಪ್ರತ್ಯಾಮ್ಲಗಳನ್ನು ನೀರಿನಲ್ಲಿ ವಿಲೀನಗೊಳಿಸಿದಾಗ ಅವುಗಳ ಏಕಮಾನ ಗಾತ್ರದಲ್ಲಿರುವ

ಅಯಾನುಗಳ($H_3O^+/OH^-$) ಸಾರತೆಯು ಕಡಿಮೆಯಾಗುತ್ತದೆ.

**16. HCl, $HNO_3$ ಇತ್ಯಾದಿಗಳು ಜಲೀಯ ದ್ರಾವಣದಲ್ಲಿ ಆಮ್ಲೀಯ ಗುಣಗಳನ್ನು ಪ್ರದರ್ಶಿಸುತ್ತದೆ ಆದರೆ ಆಲ್ಕೋಹಾಲ್ ಮತ್ತು ಗ್ಲುಕೋಸ್‌ನಂತಹ ಸಂಯುಕ್ತಗಳ ದ್ರಾವಣಗಳು ಆಮ್ಲೀಯ ಗುಣಗಳನ್ನು ಪ್ರದರ್ಶಿಸುವುದಿಲ್ಲ ಏಕೆ?**

HCl, $HNO_3$ ಇತ್ಯಾದಿಗಳು ನೀರಿನಲ್ಲಿ ಕರಗಿ $H_3O^+$ ಮತ್ತು $H^+$ ಅಯಾನುಗಳನ್ನು ಉಂಟುಮಾಡಿ, ಆಮ್ಲೀಯ ಗುಣಗಳನ್ನು ಪ್ರದರ್ಶಿಸುತ್ತವೆ. ಆದರೆ ಆಲ್ಕೋಹಾಲ್ ಮತ್ತು ಗ್ಲುಕೋಸ್ ನಂತಹ ಸಂಯುಕ್ತಳಗಳು ನೀರಿನಲ್ಲಿ ಕರಗಿ ಅಯಾನುಗಳನ್ನು ಉತ್ಪತ್ತಿಮಾಡವುದಿಲ್ಲ. ಆದುದರಿಂದ ಅವು ಆಮ್ಲೀಯ ಗುಣಗಳನ್ನು ಪ್ರದರ್ಶಿಸುವುದಿಲ್ಲ.

**17. ಆಮ್ಲದ ಜಲೀಯ ದ್ರಾವಣ ವಿದ್ಯುತ್ತಿನ ವಾಹಕವಾಗಿದೆ. ಏಕೆ?**

ಹೈಡ್ರೋಜನ್ $H^+$ ಮತ್ತು ಹೈಡ್ರೋನಿಯಂ $H_3O^+$ ಅಯಾನುಗಳು ಜಲೀಯ ದ್ರಾವಣದಲ್ಲಿರುವುದರಿಂದ ತನ್ನ ಮೂಲಕ ವಿದ್ಯುತ್ತನ್ನು ಪ್ರವಹಿಸುತ್ತವೆ. ಆದ್ದರಿಂದ ಆಮ್ಲವು ಜಲೀಯ ದ್ರಾವಣದ ವಿದ್ಯುತ್ ವಾಹಕವಾಗಿದೆ.

**18. ಶುಷ್ಕ HCl ಅನಿಲ, ಶುಷ್ಕ ಲಿಟ್ಮಸ್ ಕಾಗದದ ಬಣ್ಣ ಬದಲಾಯಿಸುವುದಿಲ್ಲ. ಏಕೆ?**

ಶುಷ್ಕ ಅನಿಲದಲ್ಲಿ ಹೈಡ್ರೋಜನ್ ಅಯಾನುಗಳಿಲ್ಲದಿರುವುದರಿಂದ, ಶುಷ್ಕ ಲಿಟ್ಮಸ್ ಕಾಗದದ ಬಣ್ಣ ಬದಲಾಯಿಸುವುದಿಲ್ಲ.

**19. ಆಮ್ಲವನ್ನು ಸಾರರಿಕ್ತಗೊಳಿಸುವಾಗ, ಆಮ್ಲವನ್ನೇ ನೀರಿಗೆ ಸೇರಿಸಬೇಕೆಂದೂ ಮತ್ತು ಆಮ್ಲಕ್ಕೆ ನೀರನ್ನು ಸೇರಿಸಬಾರದೆಂದು ಶಿಫಾರಸು ಮಾಡುವುದೇಕೆ?**

ಆಮ್ಲವನ್ನು ಸಾರರಿಕ್ತಗೊಳಿಸುವ ಕ್ರಿಯೆಯು ಬಹಿರುಷ್ಣಕವಾಗಿದ್ದು, ಆಮ್ಲಕ್ಕೆನಾದರೂ ನೀರನ್ನು ಸೇರಿಸಿದರೆ ಅಧಿಕ ಮಟ್ಟದ ಉಷ್ಣ ಬಿಡುಗಡೆಯಾಗಿ, ದ್ರಾವಣವು ಕುದಿಯುವ ಹಂತಕ್ಕೆ ಹೋಗಿ ಹೊರಚೆಲ್ಲುವುದು. ಇದರಿಂದ ಅನಾಹುತ ಸಂಭವಿಸಬಹುದು. ಆದುದುರಿಂದು ನೀರಿಗೆ ಆಮ್ಲ ಸೇರಿಸಬೇಕೇ ಹೊರತು, ಆಮ್ಲಕ್ಕೆ ನೀರನ್ನು ಸೇರಿಸಬಾರದು.

**20. ಆಮ್ಲದ ದ್ರಾವಣವನ್ನು ಸಾರರಿಕ್ತಗೊಳಿಸಿದಾಗ ಹೈಡ್ರೋನಿಯಂ ಅಯಾನು($H_3O^+$)ಗಳ ಸಾರತೆಯು ಹೇಗೆ ಪ್ರಭಾವಿತಗೊಳ್ಳುತ್ತದೆ?**

ಆಮ್ಲವನ್ನು ಸಾರರಿಕ್ತಗೊಳಿಸುವುದು ಎಂದರೆ ಅದನ್ನು ದುರ್ಬಲಗೊಳಿಸುವುದು ಎಂದರ್ಥ. ಆಮ್ಲ ದುರ್ಬಲಗೊಂಡಿದೆ ಎಂದರೆ ಅದರಲ್ಲಿನ ಹೈಡ್ರೋನಿಯಂ ಅಯಾನುಗಳ ಸಂಖ್ಯೆಯು ಯೂನಿಟ್ ಗಾತ್ರದಲ್ಲಿ ಕಡಿಮೆಯಾಗುತ್ತದೆ. ಇದರಿಂದ ಆಮ್ಲದ ಸಾರತೆಯೂ ಕಡಿಮೆಯಾಗುತ್ತದೆ.

**21. ಸೋಡಿಯಂ ಹೈಡ್ರಾಕ್ಸೈಡ್‌ನ ದ್ರಾವಣದಲ್ಲಿ ಹೆಚ್ಚಿನ ಪ್ರಮಾಣದ ಪ್ರತ್ಯಾಮ್ಲವನ್ನು ಕರಗಿಸಿದಾಗ ಹೈಡ್ರಾಕ್ಸೈಡ್ ಅಯಾನು($OH^-$)ಗಳ ಸಾರತೆಯು ಹೇಗೆ ಪ್ರಭಾವಿತಗೊಳ್ಳುತ್ತದೆ?**

ಸೋಡಿಯಂ ಹೈಡ್ರಾಕ್ಸೈಡ್‌ನಲ್ಲಿ ಹೆಚ್ಚಿನ ಪ್ರಮಾಣದ ಪ್ರತ್ಯಾಮ್ಲವನ್ನು ಕರಗಿಸಿದಾಗ ಹೈಡ್ರಾಕ್ಸೈಡ್ ($OH^-$)ಅಯಾನುಗಳ ಸಂಖ್ಯೆಯು ಹೆಚ್ಚಾಗಿ, ಪ್ರತ್ಯಾಮ್ಲದ ಸಾರತೆಯು ಹೆಚ್ಚುತ್ತದೆ.

**22. ನಿಮ್ಮಲ್ಲಿ 'ಎ' ಮತ್ತು 'ಬಿ' ಎಂಬ ಎರಡು ದ್ರಾವಣಗಳಿವೆ. ದ್ರಾವಣ 'ಎ' ಯ pH – 6 ಮತ್ತು ದ್ರಾವಣ 'ಬಿ' ಯ pH – 8. ಯಾವ ದ್ರಾವಣದಲ್ಲಿ ಹೈಡ್ರೋಜನ್ ಅಯಾನುಗಳ ಸಾರತೆ ಹೆಚ್ಚಿದೆ? ಇವುಗಳಲ್ಲಿ ಯಾವುದು ಆಮ್ಲ ಮತ್ತು ಯಾವುದು ಪ್ರತ್ಯಾಮ್ಲ?**

'ಎ' ದ್ರಾವಣದ pH–6 ಆಇರುವುದರಿಂದ, ಇದರಲ್ಲಿ ಹೈಡ್ರೋಜನ್ ಅಯಾನುಗಳ ಸಾರತೆ ಹೆಚ್ಚಿದೆ. ಇದು ಆಮ್ಲ.

'ಬಿ' ದ್ರಾವಣದ pH –8 ಆಗಿರುವುದರಿಂದ, ಇದರಲ್ಲಿ ಹೈಡ್ರೋಜನ್ ಅಯಾನುಗಳ ಸಾರತೆಯು ಕಡಿಮೆಇದೆ, ಇದು ಪ್ರತ್ಯಾಮ್ಲ.

**23. $H^+$(aq) ಅಯಾನುಗಳ ಸಾರತೆಯು ದ್ರಾವಣದ ಸ್ವಭಾವದ ಮೇಲೆ ಯಾವ ಪರಿಣಾಮ ಹೊಂದಿದೆ?**

$H^+$(aq) ಅಯಾನುಗಳ ಸಾರತೆಯು 7ಕ್ಕಿಂತ ಕಡಿಮೆಯಿದ್ದರೆ ಆಮ್ಲೀಯ ಎಂದೂ, 7ಕ್ಕಿಂತ ಹೆಚ್ಚಿದ್ದರೆ ಪ್ರತ್ಯಾಮ್ಲೀಯ ದ್ರಾವಣ ಎಂದು ಪ್ರಭಾವ ಬೀರುತ್ತದೆ. ಅಯಾನುಗಳ ಸಾರತೆ ಸರಿಸುಮಾರು 7 ಇದ್ದರೆ ಅಉ ತಟಸ್ಥ ದ್ರಾವಣ ಎಂದು ಹೇಳಲಾಗಿದೆ.

**24. ಪ್ರತ್ಯಾಮ್ಲೀಯ ದ್ರಾವಣಗಳೂ $H^+$ (aq) ಅಯಾನುಗಳನ್ನು ಹೊಂದಿವೆಯೇ? ಹೌದಾದರೆ ಅವು ಏಕೆ ಪ್ರತ್ಯಾಮ್ಲೀಯವಾಗಿವೆ?**

ಹೌದು ಪ್ರತ್ಯಾಮ್ಲೀಯ ದ್ರಾವಣಗಳು ಕೂಡಾ $H^+$ಅಯಾನುಗಳನ್ನು ಹೊಂದಿವೆ. ಆದರೆ ಅವುಗಳ ಸಾರತೆ $OH^-$ ಅಯಾನುಗಳಿಗಿಂತ ಕಡಿಮೆ ಇರುವುದರಿಂದ ಅವು ಪ್ರತ್ಯಾಮ್ಲೀಯವಾಗಿರುತ್ತವೆ.

**25. ಯಾವ ಸಂದರ್ಭಗಳಲ್ಲಿ ಒಬ್ಬ ರೈತ ತನ್ನ ಕೃಷಿ ಭೂಮಿಯ ಮಣ್ಣಿಗೆ ಸುಟ್ಟಸುಣ್ಣ (ಕ್ಯಾಲ್ಸಿಯಂ ಆಕ್ಸೈಡ್) ಅಥವಾ ಅರಳಿದ ಸುಣ್ಣ (ಕ್ಯಾಲ್ಸಿಯಂ ಹೈಡ್ರಾಕ್ಸೈಡ್) ಅಥವಾ ಸೀಮೆ ಸುಣ್ಣ (ಕ್ಯಾಲ್ಸಿಯಂ ಕಾರ್ಬೋನೇಟ್) ಬೆರೆಸುತ್ತಾನೆ?**

ಕೃಷಿ ಭೂಮಿಯ ಮಣ್ಣಿನ pH–7ಕ್ಕಿಂತ ಕಡಿಮೆ ಇದ್ದರೆ ಸುಟ್ಟಸುಣ್ಣ (ಕ್ಯಾಲ್ಸಿಯಂ ಆಕ್ಸೈಡ್) ಅಥವಾ ಅರಳಿದ ಸುಣ್ಣ (ಕ್ಯಾಲ್ಸಿಯಂ ಹೈಡ್ರಾಕ್ಸೈಡ್) ಅಥವಾ ಸೀಮೆ ಸುಣ್ಣ (ಕ್ಯಾಲ್ಸಿಯಂ ಕಾರ್ಬೋನೇಟ್) ಬೆರೆಸುತ್ತಾನೆ. ಇದರಿಂದ ಮಣ್ಣು ಆಮ್ಲಿಯತೆಯಿಂದ ತಟಸ್ಥಗೊಳ್ಳುತ್ತದೆ.

*** * * ಇದನ್ನು ಗಮನಿಸಿ ನೆನಪಿನಲ್ಲಿಡಿ.**




$H^+$ ಅಯಾನುಗಳ ಸಾರತೆ ಹೆಚ್ಚುವುದು ______ $H^+$ ಅಯಾನುಗಳ ಸಾರತೆ ಕಡಿಮೆಯಾಗುವುದು

**26. ಕ್ಯಾಲ್ಸಿಯಂ ಆಕ್ಸಿ ಕ್ಲೋರೈಡ್($CaOCl_2$)ಸಂಯುಕ್ತದ ಸಾಮಾನ್ಯ ಹೆಸರೇನು?** ಬ್ಲೀಚಿಂಗ್ ಪೌಡರ್ (ಚೆಲುವೆ ಪುಡಿ).

**27. ಕ್ಲೋರಿನ್‌ನೊಂದಿಗೆ ವರ್ತಿಸಿದಾಗ ಚೆಲುವೆಪುಡಿ ಉತ್ಪತ್ತಿಮಾಡುವ ವಸ್ತುವನ್ನು ಹೆಸರಿಸಿ.** ಕ್ಯಾಲ್ಸಿಯಂಹೈಡ್ರಾಕ್ಸೈಡ್ $Ca(OH)_2$

**28. ಗಡುಸು ನೀರನ್ನು ಮೆದುಗೊಳಿಸಲು ಬಳಸುವ ಸೋಡಿಯಂ ಸಂಯುಕ್ತವನ್ನು ಹೆಸರಿಸಿ.**

ವಾಷಿಂಗ್ ಸೋಡಾ (ಶುಷ್ಕ ಸೋಡಿಯಂ ಕಾರ್ಬೋನೇಟ್) $Na_2CO_3.10H_2O$

**29. ಸೋಡಿಯಂ ಹೈಡ್ರೋಜನ್ ಕಾರ್ಬೋನೇಟ್ ದ್ರಾವಣವನ್ನು ಕಾಸಿದರೆ ಏನಾಗುತ್ತದೆ? ಈ ಕ್ರಿಯೆಯ ಸಮೀಕರಣ ಬರೆಯಿರಿ.**

ಸೋಡಿಯಂ ಹೈಡ್ರೋಜನ್ ಕಾರ್ಬೋನೇಟನ್ನು ಕಾಸಿದಾಗ, ಸೋಡಿಯಂ ಕಾರ್ಬೋನೇಟ್, ನೀರು ಮತ್ತು ಕಾರ್ಬನ್ ಡೈಆಕ್ಸೈಡ್ ಅನಿಲ ಉತ್ಪತ್ತಿಯಾಗುತ್ತದೆ. $2NaHCO_3 \rightarrow Na_2CO_3 + H_2O + CO_2$

**30. ಪ್ಲಾಸ್ಟರ್ ಆಫ್ ಪ್ಯಾರಿಸ್ ಮತ್ತು ನೀರು ಇವುಗಳ ನಡುವಿನ ಕ್ರಿಯೆಯನ್ನು ಬರೆಯಿರಿ.**

$$CaSO_4.\tfrac{1}{2}H_2O + 1\tfrac{1}{2}H_2O \rightarrow CaSO_4.2\,H_2O$$

(ಪ್ಲಾಸ್ಟರ್ ಆಫ್ ಪ್ಯಾರಿಸ್) (ಜಿಪ್ಸಂ)

**ಅಭ್ಯಾಸದಲ್ಲಿನ ಪ್ರಶ್ನೆಗಳು:**

1. **ಈ ಕೆಳಗಿನ ಸಂದರ್ಭಗಳಲ್ಲಿ ಉಂಟಾಗುವ ರಾಸಾಯನಿಕ ಕ್ರಿಯೆಗಳ ಪದ ಸಮೀಕರಣ ಮತ್ತು ನಂತರ ಸರಿದೂಗಿಸಿದ ಸಮೀಕರಣ ಬರೆಯಿರಿ.**

(a) **ಸಾರರಿಕ್ತ ಸಲ್ಫ್ಯೂರಿಕ್ ಆಮ್ಲ ಸತುವಿನ ಚೂರುಗಳೊಂದಿಗೆ ವರ್ತಿಸಿದಾಗ.** –– $H_2SO_4 + Zn \rightarrow ZnSO_4 + H_2\uparrow$

(b) **ಸಾರರಿಕ್ತ ಹೈಡ್ರೋಕ್ಲೋರಿಕ್ ಆಮ್ಲ ಮೆಗ್ನೀಸಿಯಂ ಪಟ್ಟಿಯೊಂದಿಗೆ ವರ್ತಿಸಿದಾಗ.––** $2HCl + Mg \rightarrow MgCl_2 + H_2\uparrow$

(c) **ಸಾರರಿಕ್ತ ಸಲ್ಫ್ಯೂರಿಕ್ ಆಮ್ಲ ಅಲ್ಯೂಮಿನಿಯಂ ಪುಡಿಯೊಂದಿಗೆ ವರ್ತಿಸಿದಾಗ.––** $3H_2SO_4 + 2Al \rightarrow Al2(SO_4)_3 + 3H_2\uparrow$

(d) **ಸಾರರಿಕ್ತ ಹೈಡ್ರೋಕ್ಲೋರಿಕ್ ಆಮ್ಲ ಕಬ್ಬಿಣದ ಚೂರುಗಳೊಂದಿಗೆ ವರ್ತಿಸಿದಾಗ.--** $6HCl + 2Fe \rightarrow 2FeCl_3 + 3H_2\uparrow$

**2. ಆಲ್ಕೋಹಾಲ್ ಮತ್ತು ಗ್ಲುಕೋಸ್‌ನಂತಹ ಸಂಯುಕ್ತಗಳೂ ಸಹ ಹೈಡ್ರೋಜನ್ ಹೊಂದಿವೆಯಾದರೂ ಅವುಗಳನ್ನು ಆಮ್ಲಗಳೆಂದು ವರ್ಗೀಕರಿಸಲಾಗಿಲ್ಲ. ಇದನ್ನು ಸಾಧಿಸಲು ಒಂದು ಚಟುವಟಿಕೆಯನ್ನು ವಿವರಿಸಿ.**

- ಗ್ಲುಕೋಸ್, ಆಲ್ಕೋಹಾಲ್ (ಮದ್ಯಸಾರ), ಹೈಡ್ರೋಕ್ಲೋರಿಕ್ ಆಮ್ಲ, ಸಲ್ಫ್ಯೂರಿಕ್ ಆಮ್ಲ, ಇತ್ಯಾದಿಗಳ ದ್ರಾವಣಗಳನ್ನು ತೆಗೆದುಕೊಳ್ಳಿ.

- ರಬ್ಬರ್ ಕಾರ್ಕ್ ಮೇಲೆ ಎರಡು ಮೊಳೆಗಳನ್ನು ಜೋಡಿಸಿ ಮತ್ತು ಅದನ್ನು 100mL ಬೀಕರಿನಲ್ಲಿಡಿ.
- ಚಿತ್ರದಲ್ಲಿ ತೋರಿಸಿರುವಂತೆ ಮೊಳೆಗಳನ್ನು 6 ವೋಲ್ಟ್ ಬ್ಯಾಟರಿಯ ಎರಡು ತುದಿಗಳಿಗೆ ಬಲ್ಬ್ ಮತ್ತು ಸ್ವಿಚ್ ಮೂಲಕ ಜೋಡಿಸಿ.
- ಆಮ್ಲಗಳಲ್ಲಿರುವ ಕ್ಯಾಟಯಾನ್ $H^+$ ಆಗಿರುವುದರಿಂದ, ಆಮ್ಲಗಳು ದ್ರಾವಣದಲ್ಲಿ ಹೈಡ್ರೋಜನ್ ಅಯಾನ್ (ಜಲೀಯ$H^+$) ಗಳನ್ನು ಉಂಟುಮಾಡುತ್ತವೆ. ಇದು ಅವುಗಳ ಆಮ್ಲೀಯ ಗುಣಗಳಿಗೆ ಕಾರಣವಾಗಿದೆ ಎನ್ನುವುದನ್ನು ಸೂಚಿಸುತ್ತದೆ.
- ಈಗ ಬೀಕರ್‌ಗೆ ಸ್ವಲ್ಪ ಸಾರರಿಕ್ತ HCl ಸೇರಿಸಿ ಮತ್ತು ವಿದ್ಯುತ್ ಹಾಯಿಸಿ, ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದೊಂದಿಗೆ ಪುನರಾವರ್ತಿಸಿ.

**ವೀಕ್ಷಣೆ:** ಹೈಡ್ರೋಕ್ಲೋರಿಕ್ ಆಮ್ಲ ಮತ್ತು ಸಲ್ಫ್ಯೂರಿಕ್ ಆಮ್ಲ ಹಾಕಿದಾಗ ಮಾತ್ರ ಬಲ್ಬ್ ಬೆಳಗಿತು. ಆದರೆ ಆಲ್ಕೋಹಾಲ್ ಮತ್ತು ಗ್ಲುಕೋಸ್ ದ್ರಾವಣಗಳಲ್ಲಿ ಬಲ್ಬ್ ಬೆಳಗಲಿಲ್ಲ.

**ತೀರ್ಮಾನ:** ಹೈಡ್ರೋಕ್ಲೋರಿಕ್ ಆಮ್ಲ ಮತ್ತು ಸಲ್ಫ್ಯೂರಿಕ್ ಆಮ್ಲಗಳಲ್ಲಿ ವಿದ್ಯುತ್‌ಪ್ರವಹಿಸುವ ಅಯಾನುಗಳು ಉತ್ಪತ್ತಿಯಾದವು. ಆದರೆ ಆಲ್ಕೋಹಲ್ ಮತ್ತು ಗ್ಲುಕೋಸ್‌ಗಳಲ್ಲಿ ಅಯಾನುಗಳು ಉತ್ಪತ್ತಿಯಾಗದ ಕಾರಣ ವಿದ್ಯುತ್ ಪ್ರಸರಣವಾಗಲಿಲ್ಲ. ಆದುದರಿಂದ ಇವುಗಳಲ್ಲಿ ಹೈಡ್ರೋಜನ್‌ಗಳಿದ್ದರೂ ಇವುಗಳನ್ನು ಆಮ್ಲಗಳಾಗಿ ವರ್ಗೀಕರಿಸಲಾಗಿಲ್ಲ.

**3. ಮಳೆನೀರು ವಿದ್ಯುತ್‌ಪ್ರವಾಹವನ್ನು ಹರಿಯಬಿಡುತ್ತದೆ, ಆದರೆ ಆಸವಿತ ನೀರು ವಿದ್ಯುತ್‌ಪ್ರವಾಹವನ್ನು ಹರಿಯಬಿಡುವುದಿಲ್ಲ. ಏಕೆ?**

ಮಳೆಯ ನೀರಿನಲ್ಲಿ ಕರಗಿರುವ ಲವಣಗಳ ಅಯಾನುಗಳಿರುತ್ತವೆ, ಹಾಗಾಗಿ ಮಳೆಯ ನೀರಿನಲ್ಲಿ ವಿದ್ಯುತ್‌ಪ್ರವಹಿಸುತ್ತದೆ. ಆದರೆ ಆಸವಿತ ನೀರಿನಲ್ಲಿ ಯಾವುದೇ ಕರಗಿರುವ ಲವಣಗಳ ಅಯಾನುಗಳಿರುವದಿಲ್ಲವಾದ್ದರಿಂದ ವಿದ್ಯುತ್‌ಹಿಸುವುದಿಲ್ಲ.

**4. ಆಮ್ಲಗಳು ನೀರಿನ ಅನುಪಸ್ಥಿತಿಯಲ್ಲಿ ಆಮ್ಲೀಯ ಸ್ವಭಾವವನ್ನು ತೋರ್ಪಡಿಸುವುದಿಲ್ಲ. ಏಕೆ?**

ಆಮ್ಲಗಳು ನೀರಿನಲ್ಲಿ ವಿಲೀನವಾದಾಗ ಮಾತ್ರ ಹೈಡ್ರೋಜನ್ ಅಯಾನುಗಳನ್ನು ಬಿಡುಗಡೆ ಮಾಡುವುದರಿಂದ ಆಮ್ಲೀಯ ಸ್ವಭಾವವನ್ನು ತೋರುತ್ತವೆ.

**5. A,B,C,D ಮತ್ತು E ಈ ಐದು ದ್ರಾವಣಗಳನ್ನು ಸಾರ್ವತ್ರಿಕ ಸೂಚಕದಿಂದ ಪರೀಕ್ಷಿಸಿದಾಗ ಅನುಕ್ರಮವಾಗಿ 4,1,11,7 ಮತು 9 ತೋರಿಸಿವೆ. ಯಾವ ದ್ರಾವಣವು ತಟಸ್ಥ? ಪ್ರಬಲವಾಗಿ ಪ್ರತ್ಯಾಮ್ಲೀಯ? ಪ್ರಬಲವಾಗಿ ಆಮ್ಲೀಯ? ದುರ್ಬಲವಾಗಿ ಆಮ್ಲೀಯ ಮತ್ತು ದುರ್ಬಲವಾಗಿ ಪ್ರತ್ಯಾಮ್ಲೀಯ? ನ್ನು ಹೈಡ್ರೋಜನ್ ಅಯಾನುಗಳ ಏರಿಕೆ ಕ್ರಮದಲ್ಲಿ ಜೋಡಿಸಿ.**

A= 4 ದುರ್ಬಲ ಆಮ್ಲೀಯ ದ್ರಾವಣ, B= 1 ಪ್ರಬಲ ಆಮ್ಲೀಯ ದ್ರಾವಣ, C= 11 ಪ್ರಬಲ ಪ್ರತ್ಯಾಮ್ಲಿಯ ದ್ರಾವಣ

D= 7 ತಟಸ್ಥ ದ್ರಾವಣ, E= 9 ದುರ್ಬಲ ಪ್ರತ್ಯಾಮ್ಲೀಯ ದ್ರಾವಣ

pH ಅನ್ನು ಹೈಡ್ರೋಜನ್ ಅಯಾನುಗಳ ಸಾರತೆಯ ಏರಿಕೆಕ್ರಮದಲ್ಲಿ ಜೋಡಿಸಿರುವುದು:**C(11)> E(9)> D(7)> A(4)> B(1)**

**6. ಪ್ರನಾಳ A ಮತ್ತು B ಗಳಲ್ಲಿ ಸಮಾನ ಉದ್ದದ ಮೆಗ್ನೀಸಿಯಂ ಪಟ್ಟಿಗಳನ್ನು ತೆಗೆದುಕೊಳ್ಳಲಾಗಿದೆ. ಪ್ರನಾಳ A ಗೆ ಹೈಡ್ರೋಕ್ಲೋರಿಕ್ ಆಮ್ಲ(HCl)ವನ್ನು ಸೇರಿಸಲಾಗಿದೆ, ಪ್ರನಾಳ B ಗೆ ಅಸಿಟಿಕ್ ಆಮ್ಲ($CH_3COOH$) ವನ್ನು ಸೇರಿಸಲಾಗಿದೆ. ತೆಗೆದುಕೊಂಡ ಎರಡೂ ಆಮ್ಲಗಳ ಪ್ರಮಾಣ ಮತ್ತು ಸಾರತೆ ಎರಡೂ ಒಂದೇ ಆಗಿದೆ. ಯಾವ ಪ್ರನಾಳದಲ್ಲಿ ಹೆಚ್ಚು ತೀವ್ರವಾಗಿ ಅನಿಲದ ಗುಳ್ಳೆಗಳು ಉಂಟಾಗುತ್ತವೆ ಮತ್ತು ಏಕೆ?**

ಪ್ರನಾಳ A ನಲ್ಲಿ ಮೆಗ್ನೀಸಿಯಂ ಪಟ್ಟಿಯ ತುಣುಕುಗಳ ಜೊತೆ ಹೆಚ್ಚಿನ ಪ್ರಮಾಣದ ಅನಿಲದ ಗುಳ್ಳೆಗಳು ಬರುತ್ತವೆ, ಏಕೆಂದರೆ ಅಸಿಟಿಕ್ ಆಮ್ಲಕ್ಕಿಂತ ಹೈಡ್ರೋಕ್ಲೋರಿಕ್ ಆಮ್ಲವು ಹೆಚ್ಚು ಪ್ರಬಲತೆಯಿಂದ ಕೂಡಿದೆ.

ಹೆಚ್ಚಿನ ಪ್ರಬಲತೆಯಿರುವುದರಿಂದ ಹೆಚ್ಚಿನ ಹೈಡ್ರೋಜನ್ ($H^+$) ಅಯಾನುಗಳನ್ನು ಹೊಂದಿದೆ ಎಂದರ್ಥ.

**7. ತಾಜಾ ಹಾಲಿನ pH 6. ಅದು ಮೊಸರಾದಂತೆ ಅದರ pH ಹೇಗೆ ಬದಲಾಗುತ್ತದೆ ಎಂದು ನೀವು ಭಾವಿಸುತ್ತೀರಿ? ನಿಮ್ಮ ಉತ್ತರಕ್ಕೆ ವಿವರಣೆ ನೀಡಿ.**

ಹಾಲು ಮೊಸರಾಗಿ ಪರಿವರ್ತಿತವಾಗುವಾಗ ಬ್ಯಾಕ್ಟೀರಿಯಾದಿಂದ ಹುದುಗುವಿಕೆ ಕ್ರಿಯೆ ನಡೆದು ಲ್ಯಾಕ್ಟೋಸ್ ಸಕ್ಕರೆಯಿಂದ ಲ್ಯಾಕ್ಟಿಕ್ ಆಮ್ಲವಾಗಿ ಪರಿವರ್ತನೆಯಾಗುತ್ತದೆ. ಹಾಲಿನ pH 6 ಇದ್ದರೆ ಮೊಸರಿನ pH ಇನ್ನೂ ಕಡಿಮೆಯಾಗುತ್ತಾ ಆಮ್ಲೀಯತೆ ಹೆಚ್ಚಾಗುತ್ತದೆ.

**8. ಒಬ್ಬ ಹಾಲು ಮಾರುವವನು ತಾಜಾ ಹಾಲಿಗೆ ಅತ್ಯಲ್ಪ ಪ್ರಮಾಣದ ಅಡುಗೆ ಸೋಡಾ ಸೇರಿಸುತ್ತಾನೆ.**

(a) **ಅವನು ತಾಜಾ ಹಾಲಿನ pH ಅನ್ನು 6 ರಿಂದ ಸ್ವಲ್ಪ ಕ್ಷಾರೀಯತೆಯ ಕಡೆಗೆ ಏಕೆ ಬದಲಾಯಿಸುತ್ತಾನೆ?**

ಅಡುಗೆ ಸೋಡಾ ಸೇರಿಸುವುದರಿಂದ pH ಪ್ರಮಾಣ ಹೆಚ್ಚಾಗಿ, ಹಾಲು ಬೇಗನೆ ಕೆಡುವುದಿಲ್ಲ.

**(b) ಈ ಹಾಲು ಮೊಸರಾಗಲು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದೇಕೆ?**

ಅಡುಗೆ ಸೋಡಾವನ್ನು ಸೇರಿಸಿದ ಪರಿಣಾಮ pH ಪ್ರಮಾಣ ಹೆಚ್ಚಾಗಿ, ಬ್ಯಾಕ್ಟೀರಿಯಾಗಳ ಚಟುವಟಿಕೆ ಸ್ವಲ್ಪ ನಿಧಾನವಾಗಿ ನಡೆಯುತ್ತದೆ. ಆದುದರಿಂದ ಹಾಲು ಮೊಸರಾಗಲು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ.

**9. ತಟಸ್ಥೀಕರಣ ಕ್ರಿಯೆ ಎಂದರೇನು? ಎರಡು ಉದಾಹರಣೆ ಕೊಡಿ.**

ಆಮ್ಲ ಮತ್ತು ಪ್ರತ್ಯಾಮ್ಲಗಳು ರಾಸಾಯನಿಕವಾಗಿ ವರ್ತಿಸಿ, ನೀರು ಮತ್ತು ಲವಣಗಳನ್ನು ಉತ್ಪತ್ತಿ ಮಾಡುವ ಕ್ರಿಯೆಗೆ ತಟಸ್ಥೀಕರಣ ಕ್ರಿಯೆ ಎನ್ನುವರು. ಉದಾ: $\mathbf{NaOH_{(aq)} + HCl_{(l)} \rightarrow NaCl_{(aq)} + H_2O_{(l)}}$

**10. ವಾಷಿಂಗ್ ಸೋಡಾ ಮತ್ತು ಅಡಿಗೆ ಸೋಡಾಗಳ ಎರಡೆರಡು ಪ್ರಮುಖ ಉಪಯೋಗಗಳನ್ನು ಬರೆಯಿರಿ.**

**ವಾಷಿಂಗ್ ಸೋಡಾ(ಸೋಡಿಯಂ ಕಾರ್ಬೋನೇಟ್):**

- ಗಾಜಿನ ತಯಾರಿಕೆ, ಸಾಬೂನುಗಳ ತಯಾರಿಕೆ, ಮತ್ತು ಕಾಗದದ ತಯಾರಿಕೆಯಲ್ಲಿ ಬಳಸುವರು.
- ನೀರಿನ ಶಾಶ್ವತ ಗಡುಸುತನ ಹೋಗಲಾಡಿಸಲು ಬಳಸುವರು.

**ಅಡಿಗೆ ಸೋಡಾ(ಸೋಡಿಯಂ ಹೈಡ್ರೋಜನ್ ಕಾರ್ಬೋನೇಟ್):**

- ಜಠರಾಮ್ಲೀಯತೆಯನ್ನು ಹೋಗಲಾಡಿಸಲು **ಆಮ್ಲ ಕ್ಷಾಮಕ** (ಆ್ಯಂಟಾಸಿಡ್)ಗಳ ತಯಾರಿಕೆಯಲ್ಲಿ ಬಳಸುವರು.
- ಬೇಕರಿ ತಿನಿಸುಗಳನ್ನು ಮೃದುಗೊಳಿಸಲು ಬೇಕಿಂಗ್ ಪುಡಿ ತಯಾರಿಕೆಯಲ್ಲಿ ಬಳಸುವರು.

**11. ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ಅಣುಸೂತ್ರ ಬರೆದು, ಅದರ ಉಪಯೋಗಗಳನ್ನು ತಿಳಿಸಿ.**

ಪ್ಲಾಸ್ಟರ್ ಆಫ್ ಪ್ಯಾರಿಸ್: ಇದರ ರಾಸಾಯನಿಕ ಹೆಸರು **ಕ್ಯಾಲ್ಸಿಯಂ ಸಲ್ಫೇಟ್ ಹೆಮಿ ಹೈಡ್ರೇಟ್** : $CaSO_4.½H_2O$

**ಉಪಯೋಗಗಳು:** ಪ್ಲಾಸ್ಟರ್ ಆಫ್ ಪ್ಯಾರಿಸ್ ಅನ್ನು ಆಟಿಕೆಗಳ ತಯಾರಿಕೆ, ಅಲಂಕಾರಿಕ ವಸ್ತುಗಳಲ್ಲಿ ಮತ್ತು ನುಣುಪಾದ ಮೇಲ್ಮೈ ನಿರ್ಮಿಸಲು ಉಪಯೋಗಿಸುತ್ತಾರೆ

**ಕೆಲವು ಪ್ರಮುಖ ಪ್ರಶ್ನೆಗಳು:**

**1. ಈ ಕೆಳಗಿನವುಗಳಲ್ಲಿ ಲಿಟ್ಮಸ್ ಕಾಗದವನ್ನು ಅದ್ದಿದಾಗ/ಹಾಯಿಸಿದಾಗ ಆಗುವ ಬದಲಾವಣೆಗಳೇನು? ತಿಳಿಸಿ.**

1. **ಶುಷ್ಕ ಹೈಡ್ರೋಕ್ಲೋರಿಕ್ ಆಮ್ಲ:** ಯಾವುದೇ ಬದಲಾವಣೆ ಇಲ್ಲ (ಆಮ್ಲ)
2. **ತೇವಾಂಶಭರಿತ ಅಮೋನಿಯಾ ಅನಿಲ:** ಕೆಂಪು ಲಿಟ್ಮಸ್ ನೀಲಿ ಬಣ್ಣಕ್ಕೆ ಬದಲಾಗುತ್ತದೆ. (ಪ್ರತ್ಯಾಮ್ಲ)
3. **ನಿಂಬೆ ರಸ:** ನೀಲಿ ಲಿಟ್ಮಸ್ ಕೆಂಪು ಬಣ್ಣಕ್ಕೆ ಬದಲಾಗುತ್ತದೆ (ಆಮ್ಲ–ಸಿಟ್ರಿಕ್ ಆಮ್ಲ)
4. **ಕಾರ್ಬನ್‌ಯುಕ್ತ ಮೃದು ಪಾನೀಯಗಳು:** ನೀಲಿ ಲಿಟ್ಮಸ್ ಕೆಂಪು ಬಣ್ಣಕ್ಕೆ ಬದಲಾಗುತ್ತದೆ (ಆಮ್ಲ– ಕಾರ್ಬಾನಿಕ್ ಆಮ್ಲ)
5. **ಮೊಸರು:** ನೀಲಿ ಲಿಟ್ಮಸ್ ಕೆಂಪು ಬಣ್ಣಕ್ಕೆ ಬದಲಾಗುತ್ತದೆ (ಆಮ್ಲ– ಲ್ಯಾಕ್ಟಿಕ್ ಆಮ್ಲ)
6. **ಸಾಬೂನು ದ್ರಾವಣ:** ಕೆಂಪು ಲಿಟ್ಮಸ್ ನೀಲಿ ಬಣ್ಣಕ್ಕೆ ಬದಲಾಗುತ್ತದೆ. (ಕ್ಷಾರೀಯ– ಪ್ರತ್ಯಾಮ್ಲೀಯ ಗುಣಹೆಚ್ಚು)

**2. ನೈಟ್ರಿಕ್ ಆಮ್ಲವನ್ನು ಮೊಟ್ಟೆಯ ಗಟ್ಟಿ ಹೊದಿಕೆಯ ಮೇಲೆ ಹಾಕಿದಾಗ ಏನಾಗುತ್ತದೆ?**

ಮೊಟ್ಟೆಯ ಹೊದಿಕೆಯು ಕ್ಯಾಲ್ಸಿಯಂ ಕಾರ್ಬೋನೇಟ್‌ನಿಂದಾಗಿದ್ದು, ಅದರ ಮೇಲೆ ನೈಟ್ರಿಕ್ ಆಮ್ಲ ಬಿದ್ದಾಗ/ಹಾಕಿದಾಗ ಕಾರ್ಬನ್‌ಡೈಆಕ್ಸೈಡ್‌ನ ಗಾಳಿಯ ಗುಳ್ಳೆಗಳು ಒತ್ತೊತ್ತಾಗಿ ಕಂಡುಬರುತ್ತವೆ.

$$CaCO_3 + HNO_3 \rightarrow Ca(NO_3)_2 + H_2O + CO_2\uparrow$$

**3. ಉಪ್ಪಿನಕಾಯಿ ತಯಾರಿಕೆಯಲ್ಲಿ ವಿನೇಗರ್ ಬಳಸುವರು. ಕಾರಣವೇನು?**

ವಿನೇಗರ್ ಸಾವಯವ ಆಮ್ಲವಾಗಿದ್ದು(ಅಸಿಟಿಕ್ ಆಮ್ಲ) ಸೂಕ್ಷ್ಮಜೀವಿಗಳ ಕ್ರಿಯೆಯನ್ನು ನಿಷ್ಕ್ರಿಯಗೊಳಿಸುತ್ತದೆ. ಆದುದರಿಂದ ಉಪ್ಪಿನಕಾಯಿ **ಬೇಗ ಕೆಡದಿರಲೆಂದು ವಿನೇಗರ್ ಬಳಸುವರು**

****************